**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದೊಡ್ಡಬಳ್ಳಾಪುರ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ.**

**ಎಸ್.ಸಿ. ನಂಃ 10004 / 2024**

**ಚಾಸಾ ಃ 22**

**ಪ್ರಾಸಾ ಃ 16**

| | | |
|---|---|---|
| **ಹೆಸರು** | ಃ | ಲಕ್ಷ್ಮೀನಾರಾಯಣ |
| ತಂದೆ **ಹೆಸರು** | ಃ | ಅಶ್ವಥಪ್ಪ |
| **ವಯಸ್ಸು** | ಃ | 36 ವರ್ಷ |
| **ವೃತ್ತಿ** | ಃ | ಆಟೋ ಚಾಲಕ |
| **ವಾಸ** | ಃ | ಕೆಳಗಿನಜೋಗಹಳ್ಳಿ ಗ್ರಾಮ, |

**ಈ ದಿನ ದಿನಾಂಕಃ 22.11.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರವರಿಂದ ಃ**

1. ಸಾಕ್ಷಿಗೆ ಈಗ ನೋಟಿಸ್, ಮಹಜರ್ ಗಳನ್ನು ತೋರಿಸುತ್ತಿದ್ದು, ಅವುಗಳನ್ನು ನಿಪಿ-6 ರಿಂದ ನಿಪಿ-9 ರಲ್ಲಿ ಎಂದು, ಸಾಕ್ಷಿಯ ಸಹಿಯನ್ನು ನಿಪಿ-6 ಬಿ, 7ಬಿ, 8ಸಿ ಮತ್ತು ನಿಪಿ-9ಬಿ ಎಂದು ಗುರುತಿಸಲಾಗಿದೆ.

2. ಈಗೆ ಸುಮಾರು 2-3 ವರ್ಷ ಹಿಂದೆ ಪೋಲಿಸರು ದೊಡ್ಡಬಳ್ಳಾಪುರ ಡಿ ಕ್ರಾಸ್ ಹತ್ತಿರ ಮಹಜರ್ ಹಾಗೊ ನೋಟಿಸ್ ಗೆ ನನ್ನ ಸಹಿ ಪಡೆದುಕೊಂಡಿದ್ದು, ನನ್ನನ್ನು ಯಾವುದೇ ಸ್ಥಳಕ್ಕೆ ಕರೆದು ಸಮಕ್ಷಮ ಮಹಜರ್ ಮಾಡಿ ಯಾವುದೇ ವಸ್ತುವನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ. ಪೋಲಿಸರ ಕೋರಿಕೆಯ ಮೇರೆಗೆ ಮಹಜರ್ ಗೆ ಸಹಿ ಮಾಡಿದ್ದು, ಅದರಲ್ಲಿ ಏನು ಬರೆದಿದೆ ಎಂದು ತಿಳಿದಿಲ್ಲ, ನನ್ನೊಂದಿಗೆ ಬೇರೆ ಸಹಿ ಮಾಡಿರುತ್ತಾರೆಂದು ಗೊತ್ತಿಲ್ಲ.

3. ಸಾಕ್ಷಿಗೆ ಈಗ ನ್ಯಾಯಾಲಯದ ಮು ಮಾ 2 ರಿಂದ 6 ನ್ನು ತೋರಿಸುತ್ತಿದ್ದು, ಅವುಗಳ ಬಗ್ಗೆ ಮಾಹಿತಿ ಇಲ್ಲ, ಗುರುತಿಸಲು ಆಗುವುದಿಲ್ಲ ಎಂದು ತಿಳಿಸಿರುತ್ತಾರೆ. ಮು ಮಾ 2 ಮತ್ತು 6 ರ ಮೇಲೆ ಸಾಕ್ಷಿಯ ಸಹಿಯನ್ನು ಮು ಮಾ 2ಎ ರಿಂದ 6ಎ ಎಂದು ಗುರುತಿಸಲಾಗಿದೆ.

**( ಈ ಹಂತದಲ್ಲಿ ಸಾಕ್ಷಿದಾರರು ಪ್ರತಿಕೂಲ ಸಾಕ್ಷಿಯಾಗಿ ಸಾಕ್ಷಿ ನುಡಿದಿದ್ದರಿಂದ ವಾಟೀ ಸವಾಲು ಮಾಡಲು ಮಾನ್ಯ ಅಭಿಯೋಜಕರು ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**

4. ದಿನಾಂಕ 13.04.2023 ರಂದು ಪೋಲಿಸರು ನನ್ನನ್ನು, ಚಾಸ-21 ಮತ್ತು 23 ರವರನ್ನು ಠಾಣೆಗೆ ಕರೆಯಿಸಿ ಸದರಿ ಪ್ರಕರಣದ ಬಗ್ಗೆ ಮಾಹಿತಿ ನೀಡಿ ವಸ್ತುವನ್ನು ಅಮಾನತ್ತುಪಡಿಸಿಕೊಳ್ಳುವ ಸಂಬಂಧ ಪಂಚರಾಗುವಂತೆ ನಿಪಿ-7 ರಂತೆ ನೋಟಿಸ್ ಜಾರಿ ಮಾಡಿದ್ದು, ಅದಕ್ಕೆ ನಾವು ಒಪ್ಪಿಕೊಂಡ ಮೇರೆಗೆ ಪೋಲಿಸರು ನಮ್ಮ ಸಮಕ್ಷಮ ಚಾಸ-21 ಸಿಬ್ಬಂದಿಯವರು ಬಟ್ಟೆಗಳಾದ ಮು ಮಾ 2 ಹಾಗೂ 3 ನ್ನು ಹಾಜರುಪಡಿಸಿದ್ದಾಗ ಪೋಲಿಸರು ಮುಂದಿನ ತನಿಖೆಗಾಗಿ ಅಮಾನತ್ತುಪಡಿಸಿಕೊಂಡು ನಿಪಿ-6 ರಂತೆ ಮಹಜರ್ ನ್ನು ಮಧ್ಯಾಹ್ನ 3-00 ರಿಂದ 3-45 ರ ವರೆಗೆ ಬರೆದು ಓದಿ ಹೇಳಿದ್ದಾಗ ಸರಿ ಇದೆ ಎಂದು ಸಹಿ ಮಾಡಿದ್ದೇನೆಂದರೆ ಸರಿಯಲ್ಲ.

5. ದಿನಾಂಕ 15.04.2023 ರಂದು ಪೋಲಿಸರು ನನ್ನನ್ನು, ಚಾಸ-21 ಮತ್ತು 23 ರವರನ್ನು ಠಾಣೆಗೆ ಕರೆಯಿಸಿ ಸದರಿ ಪ್ರಕರಣದ ಬಗ್ಗೆ ಮಾಹಿತಿ ನೀಡಿ ವಸ್ತುವನ್ನು ಅಮಾನತ್ತುಪಡಿಸಿಕೊಳ್ಳುವ ಸಂಬಂಧ ಪಂಚರಾಗುವಂತೆ ನಿಪಿ-9 ರಂತೆ ನೋಟಿಸ್ ಜಾರಿ ಮಾಡಿದ್ದು, ಅದಕ್ಕೆ ನಾವು ಒಪ್ಪಿಕೊಂಡ ಮೇರೆಗೆ ಪೋಲಿಸರು ನಮ್ಮ ಸಮಕ್ಷಮ ಚಾಸ-2 ರವರು ನ್ಯಾಯಾಲಯ ಮುಂದೆ ಇಮರ ಬಟ್ಟೆಗಳಾದ ಮು ಮಾ 4 ಹಾಗೂ 6 ನ್ನು ಹಾಜರುಪಡಿಸಿದ್ದಾಗ ಪೋಲಿಸರು ಮುಂದಿನ ತನಿಖೆಗಾಗಿ ಅಮಾನತ್ತುಪಡಿಸಿಕೊಂಡು ನಿಪಿ-7 ರಂತೆ ಮಹಜರ್ ನ್ನು ಬೆಳಿಗ್ಗೆ 10-00 ರಿಂದ 10-45 ರ ವರೆಗೆ ಬರೆದು ಓದಿ ಹೇಳಿದ್ದಾಗ ಸರಿ ಇದೆ ಎಂದು ಸಹಿ ಮಾಡಿದ್ದೇನೆಂದರೆ ಸರಿಯಲ್ಲ.

6. ಸದರಿ ಪ್ರಕರಣ ಬಗ್ಗೆ ಹಾಗೂ ಮಹಜರ್ ನ ಎಲ್ಲಾ ವಿಷಯ ತಿಳಿದಿದ್ದರೂ ಕೂಡ, ಮುಮಾ ನ್ನು ಗುರುತಿಸಿದ್ದರೂ ಕೂಡ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.**

(ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದೊಡ್ಡಬಳ್ಳಾಪುರ